ಅನುಬಂಧ - ಐ

ಅಭ್ಯರ್ಥಿಗಳ ವಿಶಾಲ ಶೈಕ್ಷಣಿಕ ವಿಂಗಡಣಾ ವಿವರ

ಕ್ರಮ ಸಂಖ್ಯೆ	ವಿವರ	ಚಾಲ್ತಿ ದಾಖಲೆಯಲ್ಲಿದ್ದ ಅಭ್ಯರ್ಥಿಗಳ ಸಂಖ್ಯೆ
1.	ಕಲೆ, ವಿಜ್ಞಾನ ಮತ್ತು ವಾಣಿಜ್ಯ ಸ್ನಾತಕೋತ್ತರ ಪದವೀಧರರು	10,292
2.	ಇತರ ಸ್ನಾತಕೋತ್ತರ ಪದವೀಧರರು	1,356
3.	ಕಲೆ, ವಿಜ್ಞಾನ ಮತ್ತು ವಾಣಿಜ್ಯ ಪದವೀಧರರು	75,631
4.	ಇಂಜಿನಿಯರಿಂಗ್ ಪದವೀಧರರು	14,302
5.	ವೈದ್ಯಕೀಯ ಪದವೀಧರರು	694
6.	ಪಶುವೈದ್ಯಕೀಯ, ವಿದ್ಯೆ, ಕೃಷಿ, ಕಾನೂನು ಮತ್ತಿತರ ಪದವೀಧರರು	26,911
7.	ಡಿಪ್ಲೋಮಾದಾರರು	28,110
8.	ಕುಶಲ ಕರ್ಮಿಗಳು, ಶಿಶಿಕ್ಷು ತರಬೇತಿದಾರರು ಮತ್ತು ಇತರೆ ಉದ್ಯೋಗ ಅನುಭವ ಹೊಂದಿರುವವರು.	41,346
9.	ಮೆಟ್ರಿಕ್ ಉತ್ತೀರ್ಣರು (ಬೆರಳಚ್ಚುಗಾರರು, ಶೀಘ್ರಲಿಪಿಗಾರರು, ಶಿಕ್ಷಕರು ನಿರ್ವಾಹಕರು ಇತ್ಯಾದಿ ಸೇರಿದಂತೆ)	8,49,533
10.	ಮಿಡ್ಲಿಸ್ಕೂಲ್ ದರ್ಜೆ ಪಾಸಾದವರು ಮತ್ತು ಮೆಟ್ರಿಕ್ ಅನುತ್ತೀರ್ಣರು	1,82,439
11.	ಅಕ್ಷರಸ್ಥರು, ಅನಕ್ಷರಸ್ಥರು ಮತ್ತಿತರರು ಸೇರಿದಂತೆ.	1,92,666
	ಒಟ್ಟು	14,23,280

ನೇಸರ್ಗಿ ಸರ್ಕಾರಿ ಆಸ್ಪತ್ರೆಗೆ ಮಹಿಳಾ ವೈದ್ಯಾಧಿಕಾರಿಯ ನೇಮಕಾತಿ

849. ಶ್ರೀ ಶಿವಾನಂದ. ಹೆಚ್. ಕೌಜಲಗಿ (ಬೈಲಹೊಂಗಲ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ನೇಸರ್ಗಿ ಸರ್ಕಾರಿ ಆಸ್ಪತ್ರೆಯಲ್ಲಿ ಎಷ್ಟು ದಿನಗಳಿಂದ ಓ.ಪಿ.ಡಿ. ಆಧಾರದ ಮೇಲೆ ವೈದ್ಯಾಧಿಕಾರಿಗಳು ಕೆಲಸ ಮಾಡುತ್ತಿರುವರು ಈ ಆಸ್ಪತ್ರೆಯಲ್ಲಿರುವ ನರ್ಸ್ ಹಾಗೂ ಉಳಿದ ಸಿಬ್ಬಂದಿಗಳೆಷ್ಟು ;

ಆ) ತಾಲ್ಲೂಕು ಅಭಿವೃದ್ಧಿ ಮಂಡಳಿಯ ಕಟ್ಟಡದಲ್ಲಿ ಸುಸಜ್ಜಿತವಾದ ಹೆರಿಗೆ ಆಸ್ಪತ್ರೆ ಇದ್ದ ಸಂಗತಿ ನಿಜವೇ ಮತ್ತು ಇಲ್ಲಿ ಮಹಿಳಾ ವೈದ್ಯಾಧಿಕಾರಿ ಇಲ್ಲದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮಹಿಳಾ ವೈದ್ಯಾಧಿಕಾರಿಯ ಹೊಸ ಹುದ್ದೆಯನ್ನು ನಿರ್ಮಿಸಿ ನೇಮಿಸಲು ಸರ್ಕಾರವು ಕ್ರಮ ಕೈಗೊಂಡಿರುವುದೇ;

ಈ) ನೇಸರ್ಗಿ ಗ್ರಾಮದ ಜನಸಂಖ್ಯೆ 10,000 ಇದ್ದು ಇಲ್ಲಿ ಮಹಿಳಾ ವೈದ್ಯಾಧಿಕಾರಿಗಳಿಲ್ಲದೆ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಮಹಿಳಾ ಖಾಯಂ ವೈದ್ಯಾಧಿಕಾರಿ(ಹೊಸ ಹುದ್ದೆ ನಿರ್ಮಿಸಿ) ಯನ್ನು ನೇಮಿಸಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಜಿ.ಪುಟ್ಟಸ್ವಾಮಿಗೌಡ (ಆರೋಗ್ಯ ಸಚಿವರು) –

ಅ) ವೈದ್ಯರ ಹುದ್ದೆ ಮಂಜೂರಾಗಿರುವುದಿಲ್ಲ. ಪಕ್ಕದ ಪ್ರಾಥಮಿಕ ಆರೋಗ್ಯ ಕೇಂದ್ರ ದೇಶನೂರು ಇಲ್ಲಿನ ವೈದ್ಯಾಧಿಕಾರಿಗಳು ದಿನ ಬಿಟ್ಟು ದಿನ ಹಾಜರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಒಂದು ತಿಂಗಳಿಂದ, ರಜೆ ಮೀಸಲು ಹುದ್ದೆಯ ವೈದ್ಯರನ್ನು ಓ.ಪಿ.ಡಿ. ಮೇಲೆ ಬೆಳಗಾಂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಅವರು ನೇಮಕ ಮಾಡಿರುತ್ತಾರೆ.

ಈ ಆಸ್ಪತ್ರೆಯಲ್ಲಿ ಒಬ್ಬ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, ಒಬ್ಬ ಗುಮಾಸ್ತ ಹಾಗೂ ಇಬ್ಬರು 'ಡಿ' ದರ್ಜೆ ನೌಕರರು ಕೆಲಸ ಮಾಡುತ್ತಿದ್ದಾರೆ.

ಆ) ಹೌದು, ಮಹಿಳಾ ವೈದ್ಯರ ಹುದ್ದೆ ಮಂಜೂರಾಗಿರುವುದಿಲ್ಲ.

ಇ) ಇಲ್ಲ

ಈ) ಬಂದಿದೆ

ಉ) ಜಿಲ್ಲಾ ಪರಿಷತ್ತಿನಿಂದ ಪ್ರಸ್ತಾವನೆಗಳು ಬಂದ ನಂತರ ಮಹಿಳಾ ವೈದ್ಯಾಧಿಕಾರಿಯ ಹುದ್ದೆಯನ್ನು ಸೃಷ್ಟಿಸಲು ಕ್ರಮ ಕೈಗೊಳ್ಳಲಾಗುವುದು.

ಬೆಳಗಾಂ ಜಿಲ್ಲಾ ಕೈಗಾರಿಕಾ ಕೇಂದ್ರದವರು ಮಂಜೂರು ಮಾಡಿದ ಪ್ರೋತ್ಸಾಹ ಹಾಗೂ ರಿಯಾಯಿತಿಗಳನ್ನು ಕೂಡಲೆ ಮಂಜೂರು ಮಾಡುವ ಬಗ್ಗೆ

847. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೆಳಗಾಂ ಜಿಲ್ಲೆಯಲ್ಲಿ ಸ್ಥಾಪಿತವಾದ ಕೈಗಾರಿಕೆಗಳಿಗೆ (ಸಣ್ಣ ಕೈಗಾರಿಕೆಗಳಿಗೆ) ಜಿಲ್ಲಾ ಕೈಗಾರಿಕಾ ಕೇಂದ್ರದವರಿಂದ ಸರ್ಕಾರದ ಸಹಾಯಧನ ಪ್ರೋತ್ಸಾಹ ಹಾಗೂ ರಿಯಾಯಿತಿ ಕೊಡುವ ಹಣ ಇಲ್ಲಿಯವರೆಗೂ ಎಷ್ಟು ಬಾಕಿ ಇರುವುದು, ಯಾವ ಯಾವ ಕೈಗಾರಿಕೆಗಳಿಗೆ ಎಷ್ಟು ಎಷ್ಟು ಹಣವನ್ನು ಕೊಡಬೇಕಾಗಿರುವುದು (ಪೂರ್ಣ ಕೈಗಾರಿಕಾ ವಿವರಗಳನ್ನು ಕೊಡುವುದು) ;

ಆ) ದಿನಾಂಕ 28–9–89 ರಂದು ನಡೆದ ಸರ್ಕಾರದ ಸಹಾಯಧನ ಪ್ರೋತ್ಸಾಹ ಹಾಗೂ ರಿಯಾಯಿತಿಗಳನ್ನು ಮಂಜೂರು ಮಾಡಲಾಗಿದ್ದು ಜಿಲ್ಲಾ ಮಟ್ಟದ ಸಮಿತಿಯಲ್ಲಿ ಯಾವ ಯಾವ ಕೈಗಾರಿಕೆಗಳಿಗೆ ಎಷ್ಟೆಷ್ಟು ರಿಯಾಯಿತಿ ಹಣವನ್ನು ಕೊಡಬೇಕೆಂದು ಠರಾಯಿಸಲಾಯಿತು.? (ಆ ಕಾರ್ಖಾನೆಗಳ ಹೆಸರುಗಳನ್ನು ನೀಡಬೇಕು ಮತ್ತು ಅವುಗಳ ಮೊತ್ತವನ್ನು ಸಹ ತಿಳಿಸುವುದು);

ಇ) ದಿನಾಂಕ 28–9–89 ರಂದು ನಡೆದ ಸಭೆಯ ನಡವಳಿಕೆಯ ಪ್ರಕಾರ ಉದ್ದಿಮೆದಾರರಿಗೆ ಪ್ರೋತ್ಸಾಹ ಹಣವನ್ನು ಎಂದು ಬಿಡುಗಡೆ ಮಾಡಲಾಯಿತು ಒಂದು ವೇಳೆ ಬಿಡುಗಡೆ ಮಾಡದೇ ಇದ್ದಲ್ಲಿ ಎಂದಿನಿಂದ ಬಿಡುಗಡೆ ಮಾಡಲಾಗುವುದು;

ಈ) ರಾಜ್ಯದಲ್ಲಿ ಪ್ರೋತ್ಸಾಹ ಹಣವನ್ನು ಬಿಡುಗಡೆ ಮಾಡುವಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ತಾರತಮ್ಯ ಮಾಡಲಾಗುತ್ತಿದೆ ಎಂಬ ಸಂಗತಿ ನಿಜವೆ ಮತ್ತು ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ (ಸಂಪೂರ್ಣ ವಿವರವನ್ನು ತಿಳಿಸುವುದು) ;

ಉ) ಈ ಪ್ರೋತ್ಸಾಹ ಹಣವನ್ನು ಬಿಡುಗಡೆ ಮಾಡುವಲ್ಲಿ ತುಂಬ ವಿಳಂಬವಾಗುತ್ತಿದೆ ಎಂಬ ಸಂಗತಿ ನಿಜವೆ ; ಹಾಗಾದರೆ ಮುಂದೆಯಾದರೂ ವಿಳಂಬವಾಗದ ಹಾಗೆ ಕ್ರಮ ಕೈಗೊಳ್ಳುವಿರಾ ?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು) –

ಅ) ಬೆಳಗಾಂ ಜಿಲ್ಲೆಯಲ್ಲಿ ಸ್ಥಾಪಿಸಲಾಗಿರುವ ಕೈಗಾರಿಕೆಗಳಿಗೆ ರೂ.2,22,84,740–00 ಗಳ ರಾಜ್ಯ ಸಹಾಯಧನ ಪ್ರೋತ್ಸಾಹ ರಿಯಾಯಿತಿಗಳ ಬಾಕಿ ಇರುತ್ತದೆ. (ವಿವರಗಳ ಪಟ್ಟಿ – I ಲಗತ್ತಿಸಲಾಗಿದೆ).

ಆ) ದಿನಾಂಕ 28–9–89 ರಂದು ನಡೆದ ಜಿಲ್ಲಾ ಮಟ್ಟದ ಸಭೆಯಲ್ಲಿ ರೂ.8,49,350–00 ಪ್ರೋತ್ಸಾಹ ಸಹಾಯಧನ ರಿಯಾಯಿತಿಗಳನ್ನು 11 ಕೈಗಾರಿಕೆಗಳಿಗೆ ಮಂಜೂರು ಮಾಡಲಾಗಿದ್ದು, ವಿವರಗಳ ಪಟ್ಟಿ -II ಲಗತ್ತಿಸಲಾಗಿದೆ.